# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.27 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 03-09-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀ ವಿನೋದ್.ಕೆ.ಎಂ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಶ್ರೀಕಾಂತ್.ಕೆ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಸಂದೀಪ್.ಎಸ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.27
4. ಶ್ರೀ ಶ್ರೀಧರ್, ಸ್ಥಳೀಯರು, ಬಾಣಸವಾಡಿ,
5. ಶ್ರೀ ಕರ್ನಲ್ ಕೆ.ಎನ್ ಘೋರ್ಪಡೆ, ಸ್ಥಳೀಯರು, ಬಾಣಸವಾಡಿ
6. ಶ್ರೀಮತಿ ಅಂಜು ಮಿನಾಸ್, ಸ್ಥಳೀಯರು, ಬಾಣಸವಾಡಿ,
7. ದಿವ್ಯಾ ಪ್ರಸಾದ್, ಸ್ಥಳೀಯರು, ಬಾಣಸವಾಡಿ
8. ಶ್ರೀ ನಾರಾಯಣ ರೆಡ್ಡಿ ಪಿ.ಬಿ, ಸ್ಥಳೀಯರು, ಬಾಣಸವಾಡಿ
9. ಶ್ರೀ ಮಂಜುನಾಥ.ಸಿ, ಸ್ಥಳೀಯರು, ಬಾಣಸವಾಡಿ

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಕೆ.ಜಿ ರವಿ, ಅಸ್ಸೆಸರ್, ಬಾಣಸವಾಡಿ
2. ಶ್ರೀ ನಾರಾಯಣಸ್ವಾಮಿ, ಕಂದಾಯ ಪರಿವೀಕ್ಷಕರು
3. ಶ್ರೀ ಆನಂದ್, ಕಿರಿಯ ಆರೋಗ್ಯ ನಿರೀಕ್ಷಕರು
4. ಶ್ರೀ ರಾಜೇಶ್, ಮಾರ್ಷಲ್, ಬಿಬಿಎಂಪಿ,
5. ಶ್ರೀ ಕೆ.ಶಿವಯ್ಯ, ಕೆಲಸ ಪರಿವೀಕ್ಷಕರು,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು, ಮಾಜಿ ಪಾಲಿಕೆ ಸದಸ್ಯರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ |
|---|---|---|
| 1 | ಈ ಹಿಂದಿನ ಸಭೆಯಲ್ಲಿ ಶ್ರೀ ಕ್ರಿಸ್ಟೋಫರ್ ರವರು ಮಾತನಾಡಿ ಹೆಚ್.ಆರ್.ಬಿ.ಆರ್ ಲೇಔಟ್, 9ನೇ ಮುಖ್ಯರಸ್ತೆಯಲ್ಲಿ ಪಾದಾಚಾರಿ ಮಾರ್ಗದಲ್ಲಿ ಬಿದ್ದಿರುವ ಡೆಬ್ರೀಸ್ ಅನ್ನು ತೆರವುಗೊಳಿಸಲು ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿದ್ದು, ಸದರಿ ಡೆಬ್ರೀಸ್ ಅನ್ನು ತೆರವುಗೊಳಿಸಿರುವುದಾಗಿ ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 2 | ಶ್ರೀ ಕ್ರಿಸ್ಟೋಫರ್ ರವರು ಮಾತನಾಡಿ ಹೆಚ್.ಆರ್.ಬಿ.ಆರ್ ಲೇಔಟ್, 10ನೇ ಮುಖ್ಯರಸ್ತೆಯಲ್ಲಿ ಪಾದಾಚಾರಿ ಮಾರ್ಗವನ್ನು ಪಟ್ಟಿ ಅಂಗಡಿ ಮಾಲೀಕರು ಒತ್ತುವರಿ ಮಾಡಿಕೊಂಡಿದ್ದು, ಇದರಿಂದ ಸಾರ್ವಜನಿಕ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- Major Road** |

| | | |
|---|---|---|
| 3 | ಶ್ರೀ ಕರ್ನಲ್ ಕೆ.ಎನ್ ಘೋರ್ಪಡೆ, ಸ್ಥಳೀಯರು, ಬಾಣಸವಾಡಿ ರವರು ಮಾತನಾಡಿ 2ಕೆ ಕ್ರಾಸ್, ಹೆಚ್.ಆರ್.ಬಿ.ಆರ್ ಲೇಔಟ್ ನಲ್ಲಿ ಖಾಲಿ ನಿವೇಶನದಲ್ಲಿ ಬೃಹದಾಕಾರದ ಗಿಡಗಳು ಬೆಳೆದಿದ್ದು, ಅವುಗಳನ್ನು ತೆರವುಗೊಳಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/SHI/JHI- SWM**<br>ಸದರಿ ವಿಷಯದ ಬಗ್ಗೆ ಮಾಲೀಕರಿಗೆ ಖಾಲಿ ನಿವೇಶನದಲ್ಲಿರುವ ಗಿಡ / ಮರಗಳನ್ನು ತೆರವುಗೊಳಿಸಲು ಸೂಚಿಸಲಾಯಿತು. |
| 4 | ವಾರ್ಡ್ ವ್ಯಾಪ್ತಿಯಲ್ಲಿರುವ ಖಾಲಿ ನಿವೇಶನಗಳನ್ನು ಗುರುತಿಸಿ, ಅಂತಹ ನಿವೇಶನದ ಮಾಲೀಕರಿಗೆ ತಮ್ಮ ತಮ್ಮ ನಿವೇಶನಗಳನ್ನು ಸ್ವಚ್ಛಗೊಳಿಸಿಕೊಳ್ಳಲು ಸೂಚಿಸಲು ಸಭೆಗೆ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/SHI/JHI- SWM** |
| 5 | ವಾರ್ಡ್ ವ್ಯಾಪ್ತಿಯ ಬಾಣಸವಾಡಿ ಮುಖ್ಯರಸ್ತೆಯ ಉತ್ತಮ್ ಸಾಗರ್ ಹೋಟೆಲ್ ನಿಂದ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಮುಖ್ಯರಸ್ತೆಯ ವರೆಗೆ ರಸ್ತೆ ಗುಂಡಿಗಳು ಬಿದ್ದಿದ್ದು, ಇದರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಇವುಗಳನ್ನು ಕೂಡಲೇ ಮುಚ್ಚಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- Major Road**<br>ಸದರಿ ರಸ್ತೆಯಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ವಹಿಸಲು ಸೂಚಿಸಲಾಯಿತು. |
| 6 | ವಾರ್ಡ್ ವ್ಯಾಪ್ತಿಯ ಚಿಕ್ಕಬಾಣಸವಾಡಿ ಇಲ್ಲಿ ಇತ್ತೀಚೆಗೆ ಕಾವೇರಿ ನೀರು ಸರಬರಾಜು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BWSSB** |
| 7 | ಶ್ರೀಮತಿ ಅಂಜು ಮಿನಾಸ್, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ 2ನೇ ಡಿ ಅಡ್ಡರಸ್ತೆ, ಓ.ಎಂ.ಬಿ.ಆರ್ ಲೇಔಟ್‌ನಲ್ಲಿ ಇತ್ತೀಚೆಗೆ ಘನತ್ಯಾಜ್ಯ ನಿರ್ವಹಣೆಯು ಸರಿಯಾಗಿ ನಿರ್ವಹಿಸದೇ ಇರುವುದು ಕಂಡುಬಂದಿದ್ದು, ಬೀದಿ ಬದಿ ಕಸವನ್ನು ವಾರ್ಡಿನ ಪೌರ ಕಾರ್ಮಿಕರು ಸರಿಯಾಗಿ ಶುಚಿಗೊಳಿಸಲು ಹಾಗೂ 2ನೇ ಮುಖ್ಯರಸ್ತೆ, ಓ.ಎಂ.ಬಿ.ಆರ್ ಲೇಔಟ್‌ನ ಮನೆಯ ಎದುರುಗಡೆ ಖಾಸಗಿ ಸ್ವತ್ತಿನಲ್ಲಿ ಮರ ಗಿಡಗಳು ಬೆಳೆದಿದ್ದು, ಇದರಿಂದ ಸೊಳ್ಳೆ ಹಾಗೂ ಇತರೆ ಕ್ರಿಮಿ ಕೀಟಗಳು ಹೆಚ್ಚಾಗುತ್ತಿದ್ದು, ಅದನ್ನು ಕೂಡಲೇ ತೆರವುಗೊಳಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/SHI/JHI- SWM** |
| 8 | ದಿವ್ಯಾ ಪ್ರಸಾದ್ ರವರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಪ್ರದೇಶಗಳಲ್ಲಿ ರಸ್ತೆಯ ನಾಮಫಲಕಗಳು ಇಲ್ಲದೇ ಇರುವುದರಿಂದ ಕೂಡಲೇ ನಾಮಫಲಕಗಳನ್ನು ಅಳವಡಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP**<br>ಸದರಿ ಕಾಮಗಾರಿಯನ್ನು ಪಿ.ಓ.ಡಬ್ಲ್ಯೂ 2022 ರ ಅನುದಾನದ ಅಡಿಯಲ್ಲಿ ನಾಮಫಲಕಗಳನ್ನು ಅಳವಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುವ ಬಗ್ಗೆ ಸಭೆಗೆ ತಿಳಿಸಿಸಿದರು. |
| 9 | ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಸಾರ್ವಜನಿಕ ಬೋರ್‌ವೆಲ್‌ಗಳನ್ನು ಸಮರ್ಪಕವಾಗಿ ನಿರ್ವಹಣೆ | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BWSSB** |

| | | |
|---|---|---|
| | ಮಾಡುವ ಬಗ್ಗೆ ಸಭೆಗೆ ತಿಳಿಸಿದರು. | |
| 10 | ವಾರ್ಡ್ ವ್ಯಾಪ್ತಿಯ 2ನೇ ಕೆ ಕ್ರಾಸ್, 3ನೇ ಅಡ್ಡರಸ್ತೆ ಹಾಗೂ 2ನೇ ಮುಖ್ಯರಸ್ತೆ, ಹೆಚ್.ಆರ್.ಬಿ.ಆರ್ ಲೇಔಟ್, 1ನೇ ಬ್ಲಾಕ್ ನಲ್ಲಿ ನಾಮಫಲಕಗಳು ಇಲ್ಲದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಕೂಡಲೇ ನಾಮಫಲಕಗಳನ್ನು ಅಳವಡಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP**<br>ಸದರಿ ಕಾಮಗಾರಿಯನ್ನು ಪಿ.ಓ.ಡಬ್ಲ್ಯೂ 2022 ರ ಅನುದಾನದ ಅಡಿಯಲ್ಲಿ ನಾಮಫಲಕಗಳನ್ನು ಅಳವಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುವ ಬಗ್ಗೆ ಸಭೆಗೆ ತಿಳಿಸಿಸಿದರು. |
| 11 | ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಬೀಳುತ್ತಿರುವ ಮಳೆಯಿಂದ ಮರಗಳ ಕೊಂಬೆ ರೆಂಬೆಗಳು ಮುರಿದು ಹೋಗಿದ್ದು, ಅವುಗಳನ್ನು ತೆರವುಗೊಳಿಸಲು ಅವಶ್ಯಕ ಸಲಕರಣೆಗಳನ್ನು ಒದಗಿಸದೇ ಇರುವುದರಿಂದ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಕಷ್ಟಕರವಾಗಿರುವುದಾಗಿ ಸಭೆಗೆ ತಿಳಿಸಿದರು. | ವಾರ್ಡ್ ವ್ಯಾಪ್ತಿಯಲ್ಲಿರುವ ಹಳೆಯ ಮರದ ಕೊಂಬೆ ರೆಂಬೆಗಳನ್ನು ತೆರವುಗೊಳಿಸಲು ಕ್ರಮ ವಹಿಸುವುದು (**ವಲಯ ಅರಣ್ಯಾಧಿಕಾರಿಗಳು** (**Forest Department**) |
| 12 | ವಾರ್ಡ್ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ಪಿ.ಓ.ಡಬ್ಲ್ಯೂ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರಗಳನ್ನು ವಾರ್ಡ್ ಕಮಿಟಿ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿರುತ್ತದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 13 | ಶ್ರೀ ನಾರಾಯಣಸ್ವಾಮಿ, ಕಂದಾಯ ಪರಿವೀಕ್ಷಕರು ರವರು ಮಾತನಾಡಿ, ವಾರ್ಡ್ ವ್ಯಾಪ್ತಿಯ ಚುನಾವಣಾ ಗುರುತಿನ ಚೀಟಿಗಳನ್ನು ತಯಾರಿಸಲಾಗುತ್ತಿದ್ದು, ಹೊಸ ವಾರ್ಡ್‌ಗಳ ವಿಂಗಡನೆಯ ಬಗ್ಗೆ ಸಭೆಗೆ ತಿಳಿಸಿದರು. | |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಇಂದಿನ ಮೂರು (03) ವಾರ್ಡ್ ಕಮಿಟಿ ಸಭೆಗಳಿಗೆ ಗೈರು ಹಾಜರಾಗಿರುವ ಬೃಹತ್ ನೀರುಗಾಲುವೆ, ಬೆಸ್ಕಾಂ, ತ್ಯಾಜ್ಯ ನೀರಿನ ನಿರ್ವಹಣೆ, ಸಂಚಾರಿ ಪೊಲೀಸ್, ಬಾಣಸವಾಡಿ ರವರುಗಳು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸೂಚಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.27, ಬಾಣಸವಾಡಿ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.27, ಬಾಣಸವಾಡಿ

<u>ಪ್ರತಿಯನ್ನು</u>

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ.